# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೬–ಬಿ<br>**Part – VI-B** | ಬೆಳಗಾವಿ, ಶನಿವಾರ, ೧೭ ಜನವರಿ, ೨೦೨೬ (ಪುಷ್ಯ ೨೭, ಶಕ ವರ್ಷ ೧೯೪೭)<br>**Belagavi, Saturday, 17 January, 2026 (Pushya 27, Shaka Varsha 1947)** | ನಂ. ೦೧<br>**No. 01** |
|---|---|---|

ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

**ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾದಂಡಾಧಿಕಾರಿಗಳ ಕಛೇರಿ, ವಿಜಯಪುರ**

Office of the Deputy Commissioner & District Magistrate, Vijayapura

ದರ್ಬಾರ್‌ಹಾಲ್, ವಿಜಯಪುರ-586101(ಕರ್ನಾಟಕ) | Darbar Hall, Vijayapura - 586101(Karnataka)

Phone No: 08352 - 250021, 250479 | email:deo.bijapur@gmail.com, vijayapurdc@gmail.com

ನಂ:ಚುನಾವಣೆ:ಜಿ.ಪಂ.ತಾ.ಪಂ/ಸಿಆ.ರ್-09/2025-26 ದಿನಾಂಕ: 17.01.2026

**:: ಕರಡು ಅಧಿಸೂಚನೆ ::**

**ವಿಜಯಪುರ ತಾಲ್ಲೂಕಿನಲ್ಲಿರಚನೆಯಾಗಿದ್ದ ಗ್ರಾಮ ಪಂಚಾಯಿತಿಗಳ ಪೈಕಿ ಐನಾಪೂರ ಗ್ರಾಮ ಪಂಚಾಯತಿಯ ವ್ಯಾಪ್ತಿಯ ರಂಭಾಪೂರ ಪೂರ್ಣ ಗ್ರಾಮ ಹಾಗೂ ಜುಮನಾಳ ಗ್ರಾಮ ಪಂಚಾಯತ ವ್ಯಾಪ್ತಿಯ ಬಿಜಾಪೂರ (ಕಸಬಾ ಕಂದಾಯ ಗ್ರಾಮ) ಗ್ರಾಮೀಣ ಭಾಗದ**ಪ್ರದೇಶಗಳನ್ನು ಅಳವಡಿಸಿಕೊಂಡು “ದೊಡ್ಡ ನಗರ ಪ್ರದೇಶ” ಉದ್ಘೋಷಿಸಿ, ಸದರ ದೊಡ್ಡ ನಗರ ಪ್ರದೇಶವನ್ನು “ವಿಜಯಪುರ ಮಹಾನಗರ ಪಾಲಿಕೆಯ ಪ್ರದೇಶವೆಂದು ಪದನಾಮೀಕರಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 348 ಎಂಎಲ್‌ಆರ್ 2024(e) ದಿನಾಂಕ:31.12.2025 ರಂತೆ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಭಾಗಶಃ ಸೇರ್ಪಡೆಯಾಗಿರುವ ಗ್ರಾಮ ಪಂಚಾಯಿತಿಗಳ ಉಳಿದ ಗ್ರಾಮಗಳು

ಹಾಗೂ ಪ್ರದೇಶಗಳನ್ನು ಅಳವಡಿಸಿಕೊಂಡು ಗ್ರಾಮ ಪಂಚಾಯತಿಗಳನ್ನು ಪುನರ್ ರಚನೆ ಮಾಡಿ ಅಧಿಸೂಚಿಸಬೇಕಾಗಿರುತ್ತದೆ.

ಈ ಸಂಬಧ ಸರ್ಕಾರದ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ಕರ್ನಾಟಕ ಸರ್ಕಾರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅರೆ ಸರ್ಕಾರಿ ಪತ್ರ ದಿನಾಂಕ:07.01.2026ರ ಪತ್ರದಲ್ಲಿ "ನಗರ ಪ್ರದೇಶವಾಗಿ ಪರಿವರ್ತನೆಯಾಗಿ, ಬಾಕಿ ಉಳಿದಂತಹ ಹಾಗೂ ಭೌಗೋಳಿಕವಾಗಿ ನಿರಂತರತೆಯಲ್ಲಿ ಹೊಂದಿರುವ ಗ್ರಾಮಗಳನ್ನು/ಜನವಸತಿ ಪ್ರದೇಶಗಳನ್ನು ಒಗ್ಗೂಡಿಸಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಪ್ರಕರಣ 4(1)ರಲ್ಲಿ ನಿಗಧಿಪಡಿಸಿರುವ ಜನಸಂಖ್ಯೆಯನ್ನು ಹೊಂದಿದ್ದರೆ, ಅಂತಹ ಪ್ರದೇಶಗಳನ್ನು ಹೊಸ ಗ್ರಾಮ ಪಂಚಾಯತಿಯಾಗಿ ಘೋಷಿಸುವುದು. ಭೌಗೋಳಿಕವಾಗಿ ನಿರಂತರತೆ ಅಥವಾ ಜನಸಂಖ್ಯೆಯನ್ನು ಹೊಂದದಿದ್ದಲ್ಲಿ ಅಂತಹ ಪ್ರದೇಶಗಳನ್ನು ಹತ್ತಿರದ ಗ್ರಾಮ ಪಂಚಾಯಿತಿಗಳಿಗೆ ಸೇರಿಸಿ ಪುನರ್ ರಚಿಸಿದ ಗ್ರಾಮ ಪಂಚಾಯತಿಯನ್ನು ಅಧಿನಿಯಮದ ಪ್ರಕರಣ 4 ರಡಿಯಲ್ಲಿ ಘೋಷಿಸತಕ್ಕದ್ದು ಎಂದು ಆದೇಶ ನೀಡಲಾಗಿರುತ್ತದೆ. ನ್ಯಾಯಾಲಯದ ನಿಂದನಾ ಅರ್ಜಿ ಸಂಖ್ಯೆ:534/2024 c/w1151/2023 ಮತ್ತು 1152/2023 ಬಾಕಿ ಇರುವುದರಿಂದ, ಸಮಯದ ಅಭಾವದ ಕಾರಣ ಕರಡು ಅಧಿಸೂಚನೆ ಮೇಲಿನ ಆಕ್ಷೇಪಣೆಯನ್ನು 07 ದಿನಗಳಿಗೆ ಸೀಮಿತಗೊಳಿಸಿ ಆಹ್ವಾನಿಸತಕ್ಕದ್ದು ಎಂದು ನಿರ್ದೇಶಿಸಲಾಗಿರುತ್ತದೆ.

ಸರ್ಕಾರದ ದಿನಾಂಕ:07.01.2026ರ ಪತ್ರದಲ್ಲಿನ ನಿರ್ದೇಶನ ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ 4ನೇ ಪ್ರಕರಣದ 2ನೇ ಉಪ ಪ್ರಕರಣದಂತೆ ಪದತ್ತವಾದ ಅಧಿಕಾರವನ್ನು ಚಲಾಯಿಸಿ, ಡಾ|| ಆನಂದ್. ಕೆ. ಭಾ.ಆ.ಸೇ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ವಿಜಯಪುರ ಆದ ನಾನು ವಿಜಯಪುರ ತಾಲ್ಲೂಕಿನ ಐನಾಪೂರ ಮತ್ತು ಜುಮನಾಳ ಗ್ರಾಮ ಪಂಚಾಯತಿಗಳಿಗೆ ಈ ಕೆಳಕಂಡ ಕೋಷ್ಟಕದ 3ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಗ್ರಾಮಗಳನ್ನು2ನೇ ಅಂಕಣದ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಒಳಪಡುವಂತೆ ಗ್ರಾಮ ಪಂಚಾಯತಿಗಳನ್ನು ಪುನರ್ ರಚಿಸಿ ಕರಡು ಅಧಿಸೂಚನೆಯನ್ನು ಹೊರಡಿಸಿ ಈ ಮೂಲಕ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**ಕೋಷ್ಟಕ**

**ತಾಲ್ಲೂಕು: ವಿಜಯಪುರ**

| ಕ್ರ.ಸಂ | ಗ್ರಾಮ ಪಂಚಾಯತಿಯ ಹೆಸರು | ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳು |
|---|---|---|
| 1 | 2 | 3 |
| 1 | ಐನಾಪೂರ | ಐನಾಪೂರ<br>ಬೂರಣಾಪೂರ |
| 2 | ಜುಮನಾಳ | ಜುಮನಾಳ<br>ಖತಿಜಾಪೂರ |

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ 4ನೇ ಪ್ರಕರಣದ 2ನೇ ಉಪ ಪ್ರಕರಣದಂತೆ ಈ ಕರಡು ಅಧಿಸೂಚನೆಯಿಂದ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ:17.01.2026 ರಿಂದ 23.01.2026 ರ ಒಳಗಾಗಿ ಅಂತಹ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಕಾರಣ ಸಹಿತವಾಗಿ ಜಿಲ್ಲಾಧಿಕಾರಿಗಳು ವಿಜಯಪುರ ರವರಿಗೆ ಸಲ್ಲಿಸಬಹುದಾಗಿದೆಯೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಿದೆ.

**(ಡಾ.ಆನಂದ್ ಕೆ. ಭಾ.ಆ.ಸೇ.)**
**ಜಿಲ್ಲಾಧಿಕಾರಿಗಳು, ಹಾಗೂ**
**ಜಿಲ್ಲಾ ಚುನಾವಣಾಧಿಕಾರಿಗಳು,**
**ವಿಜಯಪುರ.**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.

SOMASHEKAR B E